

## ಪ್ರೀತಿಸುವ ಗುಣ ವೃದ್ಧಿಸಲಿ

**ಸೂರ್ಯ ಕೀರ್ತಿ,** ಕವಿ–ಅಧ್ಯಾಪಕ

ಹೊಸ ವರ್ಷ ಎಂದರೆ ಯುವಕರ ಮನಸ್ಸಿನಲ್ಲಿ ಅದೇನೋ ಸಂಭ್ರಮ ಸಂತೋಷ. ಹೊಸ ವರ್ಷ ಹೊಸ ಹಾದಿಯ ಕಡೆಗೆ ನಡೆಯಲು ನಮ್ಮನ್ನು ಸಜ್ಜುಗೊಳಿಸುತ್ತದೆ ಅನ್ನಿಸುತ್ತದೆ. ವರ್ಷದ ಆರಂಭದ ಮಾಗಿಯ ಚಳಿಗೆ ನಿಸರ್ಗದಲ್ಲಿ ಗಿಡ ಮರಗಳು ಹಳೆ ಎಲೆಗಳನ್ನು ಕಳೆದು ಹೊಸ ಚಿಗುರಿಗೆ ಕಾತರಿಸುವ ತವಕದಲ್ಲಿ ಇರುವಂತೆಯೇ, ಹೊಸ ಸಂಕಲ್ಪಕ್ಕೆ ನಾವು ಅಣಿಯಾಗುತ್ತೇವೆ. ಕವಿಗಳಿಗೆ ಹೊಸ ಲೋಕವನ್ನೇ ಪರಿಸರ ತೆರೆದು ಇಡುತ್ತದೆ.

ಹಳೆ ವರ್ಷದ ನೋವು–ನಲಿವು, ಸುಖ–ದುಃಖವನ್ನು ಪಕ್ಕಕ್ಕಿಟ್ಟು ಮುಂಬರುವ ಹೊಸ ದಿನಗಳ ಬಗ್ಗೆ ಅಪಾರ ನಿರೀಕ್ಷೆಯನ್ನು ಹೊಂದಿರುತ್ತೇವೆ. ಹಳೆಯ ದಿನಗಳು ಮಾಸಿ ಹೋದಂತೆ ನೋವೆಲ್ಲ ಮರೆಯಾಗಿ ಹೊಸ ದಿನ ಜಗತ್ತಿಗೆ ಶುಭ ತರಲಿ. ಜಗತ್ತಿನ ಎಲ್ಲ ಜೀವಕ್ಕೂ ಸುಖ ಮತ್ತು ಸಂತೋಷ ಸಿಗುವಂತೆ ಆಗಬೇಕು. ಮಾನವರಾದ ನಮಗೆ ಪ್ರೀತಿಸುವ ಗುಣವನ್ನು ವೃದ್ಧಿಸಲಿ. ನಾವೆಲ್ಲ ಒಂದೇ ಎನ್ನುವ ಭಾವದಲ್ಲಿ ಸಮಾಜದ ಕ್ರೌರ್ಯ, ಅಸ್ಪೃಶ್ಯತೆ, ಶೋಷಣೆ ಮರೆಯಾಗಲಿ ಎನ್ನುವ ಆಸೆಯಿದೆ. ನಾವೆಲ್ಲ ಮನುಷ್ಯರಾಗುತ್ತಾ ಹೊಸ ವರ್ಷದ ಸಂಭ್ರಮವನ್ನು ಸವಿಯೋಣ ಎಂದೆನಿಸುತ್ತದೆ.



## ತೊಲಗಲಿ ಬೆಟ್ಟಿಂಗ್ ಭೂತ

**ಕಿತ್ತಡಿ ಕಿರಣ್,**
ಬೈಕ್ ರೈಡರ್ – ಯೂಟ್ಯೂಬರ್



ಕೊರೊನಾದ ಲಾಕ್‌ಡೌನ್ ಸಮಯದಲ್ಲಿ ಸಮಾಜದೊಳಗೆ ನುಸುಳಿ, ಗಟ್ಟಿಯಾಗಿ ಬೇರು ಬಿಟ್ಟಿರುವ 'ಆನ್‌ಲೈನ್ ಬೆಟ್ಟಿಂಗ್ ಆ್ಯಪ್'ಗಳನ್ನು ಬುಡಸಮೇತ ಕಿತ್ತೊಗೆಯಬೇಕೆಂಬುದು ನನ್ನ ಸ್ಪಷ್ಟ ನಿಲುವು. ಈ ವರ್ಷವಾದರೂ ನಮ್ಮನ್ನಾಳುವ ಸರ್ಕಾರಗಳು ಈ ಆ್ಯಪ್‌ಗಳಿಗೆ ಕಡಿವಾಣ ಹಾಕಲೇಬೇಕು. ಸರ್ಕಾರ ಮುಂದಾಗದಿದ್ದರೆ ಜನರೇ ಎಚ್ಚೆತ್ತುಕೊಂಡು ಆ್ಯಪ್‌ಗಳಿಂದ ದೂರ ಉಳಿಯಬೇಕು.

ಕೊರೊನಾ ಸಮಯದಲ್ಲಿ ಸಬ್ ಇನ್‌ಸ್ಪೆಕ್ಟರ್ ಒಬ್ಬರು ಆನ್‌ಲೈನ್ ಕ್ಲಾಸ್‌ಗೆ ಅನುಕೂಲವಾಗಲೆಂದು ಮಗಳಿಗೆ ತಮ್ಮ ಮೊಬೈಲ್ ಕೊಟ್ಟಿದ್ದರು. 9ನೇ ತರಗತಿ ಓದುತ್ತಿದ್ದ ಆ ಹುಡುಗಿ, ಯೂಟ್ಯೂಬ್‌ನಲ್ಲಿ ಬೆಟ್ಟಿಂಗ್ ಆ್ಯಪ್‌ಗಳ ಜಾಹೀರಾತು ಕಂಡು ಕ್ಲಿಕ್ಕಿಸಿದ್ದಾಳೆ. ಆಕೆಯನ್ನು ಸೆಳೆಯುವ ದೃಷ್ಟಿಯಿಂದ ಆ್ಯಪ್ ಪ್ರಾರಂಭದಲ್ಲಿ ಬೋನಸ್ ಅಂಕ ನೀಡಿ, ಸತತವಾಗಿ ಗೆಲ್ಲುವಂತೆ ಮಾಡಿದೆ. ಆ ಗೆಲುವಿನಿಂದ ವಿದ್ಯಾರ್ಥಿನಿಯಲ್ಲಿ ಒಂದು ರೀತಿಯ ಡೊಪಮಿನ್ ಕ್ರಿಯೇಟ್ ಆಗಿ, ಆ್ಯಪ್‌ನಲ್ಲಿ ಆಡಿ ಹೆಚ್ಚು ಹಣ ಗೆಲ್ಲಬಹುದೆಂಬ ಭರವಸೆ ತುಂಬಿದೆ. ಆಟಕ್ಕೆ ವಿದ್ಯಾರ್ಥಿನಿ ವ್ಯಸನಿಯಾದ ಬಳಿಕ ಹಂತ ಹಂತವಾಗಿ 9 ಲಕ್ಷ ರೂಪಾಯಿ ಹಣವನ್ನು ತನ್ನ ಬ್ಯಾಂಕ್ ಖಾತೆಯಿಂದ ಯಾರಿಗೂ ಗೊತ್ತಾಗದಂತೆ ಕಳೆದಿದ್ದಾಳೆ.

ಸಮಾಜದ ಬಗ್ಗೆ ಜವಾಬ್ದಾರಿವುಳ್ಳ ಸೆಲೆಬ್ರಿಟಿ ಕ್ರಿಕೆಟಿಗರು, ಸಿನಿಮಾ ನಟರು, ಯೂಟ್ಯೂಬ್‌ನಲ್ಲಿ ದೊಡ್ಡ ಮಟ್ಟದ ಹೆಸರು ಮಾಡಿದವರು ಈ ಆ್ಯಪ್‌ಗಳ ಜಾಹೀರಾತಿನಲ್ಲಿ ಕಾಣಿಸಿಕೊಂಡು ಜನರನ್ನು ಆ್ಯಪ್‌ಗಳತ್ತ ಸೆಳೆಯುತ್ತಿರುವುದು ಶೋಚನೀಯ ಸಂಗತಿ. ಇದೇ ಆ್ಯಪ್‌ಗಳಿಂದ ಎಷ್ಟು ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ, ಎಷ್ಟು ಕುಟುಂಬಗಳು ಬಲಿಯಾಗುತ್ತಿವೆ ಅನ್ನೋದನ್ನು ಜವಾಬ್ದಾರಿವುಳ್ಳವರು ತಿಳಿಯಬೇಕಲ್ಲವೇ?

ಭಂಗ ಬಂದೀತೋ ಎಂಬ ಭಾವ ಮನಸ್ಸಿನಲ್ಲಿ ಮೂಡಿ ಕೈ ತಡೆಯುತಿತ್ತು. ಆ ಮೂರ್ತಿ ಮನೆಗೆ ಬಂದಾಗಿನಿಂದ ಮನೆಯ ಹಿರಿಯರು ವಾರ್ತೆ ಕೇಳುವಾಗಲೂ ಟೀವಿಯನ್ನು ಸಣ್ಣ ದನಿಯಲ್ಲಿಡುವುದನ್ನು ಗಮನಿಸಿದ್ದೆ.

ಒಮ್ಮೆ ನನ್ನ ತಂಗಿ ಆ ಮೂರ್ತಿಯನ್ನೆತ್ತಿ ಆಟವಾಡಲು ತೊಡಗಿದಳು. ಹಿಂದೆ ಮುಂದೆ ತಿರುಗಿಸಿ ಅದ್ವೇಗೋ ಮೂರ್ತಿಯ ಪಾದಕ್ಕಿದ್ದ ಸಣ್ಣ ಸ್ವಿಚ್ಚನ್ನು ಗುರುತಿಸಿ, ಅದನ್ನು ಒತ್ತಿದಳು. ಅವಳು ಸ್ವಿಚ್ಚು ಹಾಕಿದೊಡನೆ ಇಡೀ ಮನೆಗೆ ಕೇಳಿಸುವಂತೆ ರುದ್ರ ಭೀಕರ ಸದ್ದೊಂದು ಬುದ್ಧನ ಮೂರ್ತಿಯಿಂದ ಉಲಿಯಲು ಶುರುವಾಯಿತು. ಸರಿಯಾಗಿ ಕಿವಿಗೊಟ್ಟು ಕೇಳದಿದ್ದರೆ ಅದೇನೆಂದು ಗುರುತಿಸಲೇ ಸಾಧ್ಯವಾಗದಷ್ಟು ಗದ್ದಲ ಆ ಸದ್ದಿನಿಂದ ಸೃಷ್ಟಿಯಾಗಿತ್ತು. ಗಂಟೆ–ಜಾಗಟೆಗಳ ಅಬ್ಬರದ ನಡುವೆ ವಿದ್ಯುಜ್ಜನಿತ ಓಂ–ಕಾರದ ಅಲೆಗಳು ಮೂಡಿ ಟೀವಿಗಿಂತ ಕರ್ಕಶ ಸಪ್ಪಳ ಇಡೀ ಮನೆಯನ್ನು ಪ್ರತಿಧ್ವನಿಸುತ್ತಿತ್ತು.

ಮುಂದೆ ಕೆಲದಿನಗಳು ಮೂರ್ತಿಯ ಬೆನ್ನಿಗಿದ್ದ ಸೆಲ್ ಖಾಲಿಯಾಗುವ ತನಕ ದಿನಕ್ಕೆ ಹತ್ತಾರು ಬಾರಿ ಆ ಅಡಚಿಕ್ಕುವ ಸದ್ದಿಗೆ ಕಿವಿಯಾಗುವ ಭಾಗ್ಯ ನಮ್ಮದಾಯಿತು. ಸೆಲ್ ಮುಗಿದು ಹೋದ ಮೇಲೆ ಆ ಮೂರ್ತಿಯನ್ನು ಮತ್ತೆ ಟೀವಿಯ ಮುಂದಿಡುವ ಆಸಕ್ತಿ ಮನೆಯಲ್ಲಿ ಯಾರಿಗೂ ಉಳಿದಿರಲಿಲ್ಲ.

ಅದೇ ಪ್ರಶಾಂತ ಮಂದಹಾಸದ ಅದೇ ಬುದ್ಧ. ಅದೇ ಆಲದ ಮರದ ನೆರಳು. ಆಟಿಕೆಗಳ ಡಬ್ಬಿಯಲ್ಲಿ ತಲೆಕೆಳಗಾಗಿ ಬಿದ್ದಿದ್ದ.

ಸೂಚ್ಯದ ಕೊರತೆಯೇ ಬಂಡವಾಳವಾಗಿರುವ ಈ ಹೊಸ ಕಾಲದಲ್ಲಿ, ಮಕಾಡೆ ಮಲಗಿರುವ ಬುದ್ಧನನ್ನು ಆಟಿಕೆಗಳ ಡಬ್ಬದಿಂದೆತ್ತಿ ಮತ್ತೆ ಮನೆಯ ಕೇಂದ್ರದಲ್ಲಿಟ್ಟು ನಂಬುವ ಶ್ರದ್ಧೆಯನ್ನು ಈ ಹೊಸ ವರುಷ ನಮಗೆ ಕರುಣಿಸಲಿ.

ಪ್ರತಿಕ್ರಿಯಿಸಿ: feedback@sudha.co.in